KATK010039232023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ ಸಂಖ್ಯೆ.474/2023**

ಪ್ರಾ.ಸಾ. ಃ **7**

ದೋ.ಸಾ. ಃ **10**

ದಿ.**03.03.2026**

ಹೆಸರು ಃ ಮೌನೇಶ

ತಂದೆಯ ಹೆಸರು ಃ ಭೀಮಣ್ಣ ಕುರಿ

ವಯಸ್ಸು ಃ **16** ವರ್ಷ

ಉದ್ಯೋಗ ಃ **9** ನೇ ತರಗತಿಯ ವಿದ್ಯಾರ್ಥಿ

ವಾಸಸ್ಥಳ ಃ ಸುರಪುರ**,** ಯಾದಗಿರಿ ಜಿಲ್ಲೆ

ಪ್ರಶ್ನೆ ಃ ನಿನ್ನ ಹೆಸರೇನು **?**

ಉತ್ತರ ಃ ಮೌನೇಶ

ಪ್ರಶ್ನೆ ಃ ಯಾವ ತರಗತಿಯಲ್ಲಿ ಓದುತ್ತಿದ್ದೀಯಾ **?**

ಉತ್ತರ ಃ **9** ನೇ ತರಗತಿ

ಪ್ರಶ್ನೆ ಃ ನೀನು ಎಲ್ಲಿಗೆ ಬಂದಿದ್ದೀಯಾ **?**

ಉತ್ತರ ಃ ಕೋರ್ಟಿಗೆ ಬಂದಿದ್ದೇನೆ.

ಪ್ರಶ್ನೆ ಃ ಕೋರ್ಟಿನಲ್ಲಿ ಸತ್ಯ ಹೇಳಬೇಕೋ**,** ಸುಳ್ಳು ಹೇಳಬೇಕೋ **?**

ಉತ್ತರ ಃ ಸತ್ಯ

ಪ್ರಶ್ನೆ ಃ ಸುಳ್ಳು ಹೇಳಿದರೆ ಏನಾಗುತ್ತದೆ **?**

ಉತ್ತರ ಃ ಸುಳ್ಳು ಹೇಳಿದರೆ ಏನಾಗುತ್ತದೆ ಗೊತ್ತಿಲ್ಲ.

ಪ್ರಶ್ನೆ ಃ ಕೋರ್ಟಿಗೆ ಏತಕ್ಕೆ ಬಂದಿದ್ದೀಯಾ **?**

ಉತ್ತರ ಃ ಸತ್ಯ ಹೇಳಲು

ಮೇಲಿನ ಪ್ರಶ್ನೆಗಳಿಂದ ಈ ಸಾಕ್ಷಿಗೆ ಹಾಕಲಾದ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರವನ್ನು ನೀಡುವ ಸಾಮರ್ಥ್ಯವಿದೆ ಎಂದು ಕಂಡುಬರುತ್ತಿದ್ದು, ಅದರಂತೆ ಸಾಕ್ಷಿಗೆ ಸತ್ಯಪ್ರತಿಜ್ಞೆಯ ಪ್ರಮಾಣವಚನವನ್ನು ಬೋಧಿಸಬಹುದೆಂಬ ಅಭಿಪ್ರಾಯಕ್ಕೆ ಬರುತ್ತಾ ಸಾಕ್ಷಿಗೆ

ಸತ್ಯಪ್ರತಿಜ್ಞೆಯ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ನನಗೆ ಮಲ್ಲಿಕಾರ್ಜುನ ಮತ್ತು ಗದ್ದಪ್ಪ ಯಾರೆಂದು ಗೊತ್ತಿಲ್ಲ. ನಾನು 6 ನೇ ತರಗತಿಯನ್ನು ವಿಶ್ವಭಾರತಿ ಹೈಯರ್ ಪ್ರೈಮರಿ ಸ್ಕೂಲ್ ನಲ್ಲಿ ಓದಿದ್ದೇನೆ. ಈಗಲೂ ಅಲ್ಲಿಯೇ ಓದುತ್ತಿದ್ದೇನೆ, ಹಾಸ್ಟೆಲ್ ನಲ್ಲಿ ಇದ್ದೇನೆ. 6 ನೇ ತರಗತಿ ಓದುವಾಗಲೂ ಕೂಡಾ ಅದೇ ಹಾಸ್ಟೆಲ್ ನಲ್ಲಿ ಇದ್ದೆನು. ನನಗೆ ಮಲ್ಲಮ್ಮ ಗೊತ್ತಿದೆ. ಮಲ್ಲಮ್ಮ ರಾತ್ರಿ 8.00 ಗಂಟೆಯವರೆಗೆ ಹಾಸ್ಟೆಲ್ ನಲ್ಲಿ ಟ್ಯೂಷನ್ ಕೊಟ್ಟು ಹೋಗುತ್ತಿದ್ದರು. ನನಗೆ ಆರೋಪಿ ಗೊತ್ತಿದೆ. ಆರೋಪಿ ನಮ್ಮ ಹಾಸ್ಟೆಲ್ ಗೆ ಬರುತ್ತಿದ್ದರು. ನಾನು ಊರಿಗೆ ಹೋಗಿದ್ದಾಗ ಮೇವು ತರಲು ಹೋದಾಗ ನನ್ನ ಎಡಕೈನ ತೋರುಬೆರಳಿಗೆ ಗಾಯವಾಗಿತ್ತು, ನಾನು ಊಟ ಮಾಡಿ ಮಲಗಿದ್ದೆನು. ಭರತ್ ಕುಮಾರ್ ಸರ್ ಬಂದಿದ್ದರಂತೆ, ಅವರು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ನನಗೆ ಆರೋಪಿ ಹೊಡೆದಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.
2. ನಾನು ಊರಿಗೆ ಹೋಗಿ ವಾಪಸ್ ಬಂದಾಗ ತುಮಕೂರಿನ ನ್ಯಾಯಾಲಯಕ್ಕೆ ಹೋಗಿದ್ದೆನು. 4 ಜನ ನ್ಯಾಯಾಲಯಕ್ಕೆ ಹೋಗಿದ್ದೆವು, ಒಬ್ಬೊಬ್ಬರನ್ನೇ ಕೇಳಿದರು, ನನಗೆ ಹೊಡೆದಿಲ್ಲ ಎಂದು ಹೇಳಿದೆನು. ನಾನು ನ್ಯಾಯಾಲಯಕ್ಕೆ ಬರುವಾಗ ನನ್ನ ಜೊತೆಗೆ ನನ್ನ ಮಾವ ಸೋಮಣ್ಣ ಬಂದಿದ್ದರು. ನಾನು ನ್ಯಾಯಾಲಯದಲ್ಲಿ ಹೇಳಿಕೆಯನ್ನು ಕೊಟ್ಟಿಲ್ಲ. ಈಗ ತೋರಿಸಿದ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಹೇಳಿಕೆಯನ್ನು ನಿಶಾನೆ ಪಿ33 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ33(ಎ) ಎಂದು ಗುರುತಿಸಲಾಯಿತು.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು

ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

**3.** ದಿ.**21.11.2022** ರಂದು ರಾತ್ರಿ **9.00** ಗಂಟೆಗೆ ಮಲ್ಲಮ್ಮ ಮಿಸ್ ಹಾಸ್ಟೆಲ್ ನಲ್ಲಿದ್ದ ನಮಗೆ ಊಟ ಹಾಕಿಸಿ ಮನೆಗೆ ಹೋದರು ಎಂದರೆ ಸರಿಯಲ್ಲ. ನಾವು ಮಲಗಿಕೊಂಡಿದ್ದಾಗ ಆರೋಪಿ ರಾತ್ರಿ **10.30** ಗಂಟೆಗೆ ಬಂದು ನಮ್ಮ ಎಲ್ಲರನ್ನೂ ಎಬ್ಬಿಸಿ ಸಾಲಾಗಿ ನಿಲ್ಲಿಸಿ, ಯಾಕ್ರೋ ಇಷ್ಟು ಬೇಗ ಮಲಗಿದ್ದೀರಾ, ನಾನು ಹೇಳಿದ ಮೇಲೆ ನೀವೆಲ್ಲಾ ಮಲಗಬೇಕು ಎಂದು ಹೇಳಿ, ಎಲ್ಲರಿಗೂ ತೆಂಗಿನ ಎಡಮಟ್ಟೆಯಿಂದ, ಬೆಲ್ಟ್ ನಿಂದ ಹೊಡೆದರು, ನನ್ನ ಬಲಕೈ ಬೆರಳಿಗೆ ಪೆಟ್ಟು ಬಿದ್ದಿತು ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ**34** ಎಂದು ಗುರುತಿಸಲಾಯಿತು. ನಾನು ಪೋಲೀಸರ ಮುಂದೆ ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದರೂ ಈಗಲೂ ಅದೇ ಶಾಲೆಯಲ್ಲಿ ಓದುತ್ತಿರುವುದು ಮತ್ತು ಹಾಸ್ಟೆಲ್ ನಲ್ಲಿ ಇರುವುದರಿಂದ ಆರೋಪಿಯನ್ನು ಬಚಾವು ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಂ.ಸಿ.ಚಂದ್ರಯ್ಯ, ವಕೀಲರಿಂದ ಆರೋಪಿತರ ಪರವಾಗಿ :**

**4.** ನಾನು ಊರಿಗೆ ಹೋಗಿ ಒಂದು ತಿಂಗಳ ನಂತರ ನ್ಯಾಯಾಲಯಕ್ಕೆ ಬಂದಿದ್ದೆನು.

ಮರು ವಿಚಾರಣೆ : ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು